ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮಾನ್ಯ ಮುಖ್ಯ ಮಂತ್ರಿಯವರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಈ ಸದನದ ಕಾರ್ಯಕಲಾಪಗಳು ಬಹಳ ಹೆಚ್ಚಾಗಿರುವುದರಿಂದ ಸದನದ ಅಮೂಲ್ಯ ವೇಳೆಯನ್ನು ಹರಣ ಮಾಡುವುದಕ್ಕೆ ಹೋಗದೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ಏನೆಂದರೆ, ತಾಲ್ಲೂಕು ಬೋರ್ಡ್ಸ್ ಎಲೆಕ್ಷನ್ಸ್ ವಿಚಾರದಲ್ಲಿ ಪತ್ರಿಕೆಗಳಲ್ಲಿ ಏನು ಪ್ರಕಟವಾಗಿದೆ ಆದರ ಬಗ್ಗೆ ಇಲ್ಲಿ ಪ್ರಸ್ತಾಪ ಬಂದಿದೆ. ಆದ್ದರಿಂದ ಇವತ್ತು ಅಥವಾ ನಾಳೆಯೊಳಗೆ ಇದರ ಬಗ್ಗೆ ಸರ್ಕಾರದ ನಿರ್ಣಯ ಏನು ಎಂಬುದನ್ನು ಸಭೆಗೆ ತಿಳಿಸಬೇಕು. ಮಾನ್ಯ ಸದಸ್ಯರಾದ ಶ್ರೀಮಾನ್ ಭಾಸ್ಕರ ನಾಯ್ಡುರವರು ತಮ್ಮ ಅನುಭವವನ್ನು ಹೇಳಿದರು. ಕಾನೂನು ಪರಿಮಿತಿಯೊಳಗೆ ಚುನಾವಣೆಗಳನ್ನು ನಡೆಸತಕ್ಕ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. ಈಗಿರತಕ್ಕ ಕಾನೂನಿನಲ್ಲಿ ಇದು ಸುಸ್ಪಷ್ಟವಾಗಿದೆ. ಇವತ್ತು ಕೆಲವರು ಅರ್ಜಿ ಕೊಟ್ಟು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿ ಎಂದು ಹೇಳಿರಬಹುದು. ಆದರೆ ಅವರ ಹೆಸರು ಲಿಸ್ಟ್‌ನಲ್ಲಿ ಇರುತ್ತದೆಯೇ ಹೊರತು ಅವರು ಓಟುದಾರರಾಗುವುದಿಲ್ಲ. Unless the Deputy Commissioner is going to take a final decision after obtaining necessary information from the Tahsildar, whether he actually resides in that area or not..... ಇದನ್ನೆಲ್ಲಾ ಪರಿಶೀಲನೆ ಮಾಡಿ ಚುನಾವಣೆ ಮಾಡತಕ್ಕ ಪರಿಜ್ಞಾನ ಚುನಾವಣಾಧಿಕಾರಿಗಳಿಗೆ ಇರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇವತ್ತು ಪಂಚಾಯಿತ್ ರಾಜ್ಯ ಸಚಿವರು ತಮ್ಮ ಕೊಠಡಿಗೆ ಸಂಬಂಧಪಟ್ಟ ಸದಸ್ಯರನ್ನೂ ಮತ್ತು ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಯವರನ್ನೂ ಕರೆಸಿಕೊಂಡು ಚರ್ಚಿಸಿ ತಮ್ಮ ಅಂತಿಮ ತೀರ್ಮಾನ ಏನು ಎಂಬುದನ್ನು ನಾಳೆ ಈ ಸದನಕ್ಕೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ನಮ್ಮ ಸರ್ಕಾರದ ಈ ಧೋರಣೆಯನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇದು ಸರಿಯೇ ತಪ್ಪೇ ಎಂಬುದನ್ನು ವಾದಮಾಡುವುದಕ್ಕೆ ಈಗ ಸಮಯವಿಲ್ಲ.....

ಅಧ್ಯಕ್ಷರು.—ಪ್ರತಿಯೊಬ್ಬ ಸದಸ್ಯರೂ ಮಾತನಾಡುತ್ತಾ ಹೋದರೆ ಈ ಸದನದ ಯಾವ ಕಾರ್ಯ ಕಲಾಪಗಳನ್ನೂ ನಡೆಸುವುದಕ್ಕಾಗುವುದಿಲ್ಲ. ಈಗಲೇ ೨೦ ನಿಮಿಷ ಕಳೆದುಹೋಯಿತು. I with hold my consent to the adjournment motion.

ಶ್ರೀ ಡಿ. ದೇವರಾಜ ಅರಸ್.— ಮಾನ್ಯ ಸದಸ್ಯರಾದ ಭೀಮಣ್ಣನವರು ಸರ್ಕಾರದ ಮೇಲೆ ಏನೋ ಹೇಳಬೇಕು ಎಂದು ತವಕ ಪಡುತ್ತಿದ್ದಾರೆ. ಹೋಗಲಿ ಒಂದೆರಡು ನಿಮಿಷ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರದವರು ಲೀಗಲ್ ಪಾಯಿಂಟ್‌ಗೆ ವಿರುದ್ಧವಾಗಿ, ಸಂವಿಧಾನದ ವಿರುದ್ಧವಾಗಿ ಹೋಗಿ ಸಮಯವನ್ನು ಕಳೆಯಬಾರದು ಎಂದು ನಾನು ಹೇಳುತ್ತೇನೆ. ಇದರಲ್ಲಿ ಇಂಟರ್ ಪ್ರಿಟೇಷನ್ ಕೊಡತಕ್ಕ ವಿಚಾರ ಇದ್ದು, ಇದನ್ನು ಸರ್ಕಾರದವರು ಯೋಚನೆ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ.

Selection of Munsiffs

SRI S. S. ARAKERI.— Sir, I have sent a notice regarding selection of Munsiffs.

ಅಧ್ಯಕ್ಷರು.—ಇದು ನಾಳೆ ಬರುತ್ತದೆ, ಮಾನ್ಯ ಸದಸ್ಯರು ಆಗಲೇ ಒಂದೊಂದು ಟರ್ನ್ ಕೆಲಸ ಮಾಡಿದ್ದೀರಿ. ತಾವು ಈ ರೀತಿಯಾಗಿ ಹೇಳುತ್ತಾ ಹೋದರೆ ಈ ಮನೆಯ ಕೆಲಸಗಳು ಹೇಗೆ ನಡೆಯಬೇಕು ತಾವು ಯಾವುದೇ ಕೆಲಸಕ್ಕಾಗಲೀ ದಯಮಾಡಿ ನನಗೆ ತಿಳಿಸಿ ನಾನಾ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಸಿ. ಎಂ. ಆರ್ಮುಗಂ.—ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ, ನಾನೂ ಮತ್ತು ಮಾನ್ಯ ಆರಕೇರಿಯವರು ಈ ವಿಷಯದ ಬಗ್ಗೆ ಸಹಿ ಮಾಡಿ ಕಳುಹಿಸಿದ್ದೇವೆ. ತಾವು ಇದಕ್ಕೆ ಪ್ರಾಮುಖ್ಯತೆ ಕೊಡಲೇಬೇಕು.

ಅಧ್ಯಕ್ಷರು.—ನಾನು ನಾಳೆ ಇದನ್ನು ಹಾಕಿಸುತ್ತೇನೆ.

[Strike by K.E.B. officials]

ಶ್ರೀ ಯು. ಬಿ. ಬೋರ್ಕರ್.—ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನ ನೌಕರರು ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ಸಭೆಯ ಗಮನಕ್ಕೆ ಒಂದೆರಡು ವಿಷಯಗಳನ್ನು ತರುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನನ್ನನ್ನು ಆಮೇಲೆ ಬಂದು ನೋಡಿ. ಸಾಮಾನ್ಯವಾಗಿ ಸಾರ್ವಜನಿಕ ಹಿತದೃಷ್ಟಿ ಇರತಕ್ಕ ವಿಚಾರಗಳನ್ನು ಇಲ್ಲಿ ತಾವು ಹೇಳಬೇಕು.

CALLING ATTENTION TO MATTERS OF URGENT PUBLIC IMPORTANCE

(*i*) *re : Katha transfer and bifurcation cases referred to the BDA in Bangalore*

ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ).— ಮಾನ್ಯ ಸಭಾಪತಿಗಳೇ, ಖಾತೆಗಳನ್ನು ವರ್ಗಾವಣೆ ಮಾಡುವ ವಿಷಯದಲ್ಲಿ ಪುರಸಭೆಯವರು ಎಲ್ಲಾ ಪ್ರಕರಣಗಳನ್ನು ಬೆಂಗಳೂರು ಪ್ರಾಧಿಕಾರಕ್ಕೆ ಕಳುಹಿಸಿರುವ ಬಗ್ಗೆ ಬೆಂಗಳೂರು ನಗರದ ನಾಗರೀಕರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಪೌರಾಡಳಿತ ಸಚಿವರ ಗಮನವನ್ನು ಸೆಳೆಯುತ್ತೇನೆ.

SRI H. C. SRIKANTAIAH (Minister for Municipal Administration).– I wish to make the following statement ;

Khata transfer is made according to the provisions under Section 106 of the City of Bangalore Municipal Corporation Act 1949. Applications for transfer of Khata received after the new Act came into force are disposed off as per provisions under Sec. 114 of the Karnataka Municipal Corporation Act, 1976.

The time allowed for transfer of khata is 7 days and the time allowed for disposal of bifurcation of papers is 30 days. The time limit is being watched closely and for any lapses, severe action is being taken against the concerned officials. This system has shown effective improvements in the disposal of these applications. If applications are complete in all respects, they are disposed of expeditiously. The delay in most of the cases is due to the fact that the parties do not comply with the requirements even though intimation sent to them by the office, With a view to expedite disposal of such cases the powers hitherto exereised by the Commissioner are delegated to the Deputy Commissioner (Revenue).

The bifurcation of the properties either the building or the land are being referred to the Bangalore Development Authority in